

ನ್ಯಾಷನಲ್ ಲೈಬ್ರರಿ ಒಳಗೆ ಪೇರಿಸಿಟ್ಟ ಪುಸ್ತಕಗಳು



ಶಾಂತಿ ಮಾರ್ಗದಲ್ಲಿ ಸ್ವಾತಂತ್ರ್ಯ ಪಡೆದ ದ್ಯೋತಕವಾಗಿರುವ ಪಾದಗಳ ಗುರುತು

ಚೀಟಿಯ ಕೊರಳ ಹಾರ ಧರಿಸಿ, ಕೈಯಲ್ಲಿ ತಮ್ಮ ಕಂಪನಿಯ ಬೋರ್ಡ್ ಹಿಡಿದು ನಿಂತಿರುತ್ತಾರೆ. ನಾವು ಬುಕ್ ಮಾಡಿದ್ದ ಫ್ರೀ ವಾಕಿಂಗ್ ಟೂರ್‌ನಲ್ಲಿ ಕ್ರಿಸ್ಟಿನಾ ಎಂಬುವರು ನಮ್ಮ ಗೈಡ್ ಆಗಿದ್ದರು. ಕೆಲವೇ ನಿಮಿಷಗಳಲ್ಲಿ ಹತ್ತಿಪ್ಪತ್ತು ಜನರು ನೆರೆದರು. ಆಸ್ಟ್ರೇಲಿಯಾ, ಕೆನಡಾ, ಇಂಗ್ಲೆಂಡ್, ಭಾರತ ಮತ್ತು ಪಕ್ಕದ ಫಿನ್ಲೆಂಡ್ ದೇಶದಿಂದ ಬಂದವರಿದ್ದರು.

## ಲಾಟ್ವಿಯಾ ಎಂಬ ಸಿರಿವಂತ ದೇಶ

ಎರಡು ಮಹಾಯುದ್ಧಗಳು ಹಾಗೂ ಜರ್ಮನ್, ಸ್ವೀಡಿಷ್ ಮತ್ತು ರಷ್ಯನ್ನರ ಕೈಗೆ ಸಿಕ್ಕು ಚಟ್ನಿ ಆಗಿದ್ದ ಲಾಟ್ವಿಯಾ 1991ರಲ್ಲಿ ಸರ್ವತಂತ್ರ ಸ್ವತಂತ್ರ ದೇಶವಾಗಿದ್ದು. ಶಿಕ್ಷಣ, ಆರ್ಥಿಕ ಚೇತರಿಕೆಗಳಿಗೆ ಹೆಚ್ಚು ಒತ್ತು ಕೊಟ್ಟಿದ್ದರ ಪರಿಣಾಮ ಕೆಲವೇ ವರ್ಷಗಳಲ್ಲಿ ಅದೊಂದು ಸಿರಿವಂತ ದೇಶವಾಗಿ ಹೊರಹೊಮ್ಮಿದೆ. ವಿಶ್ವದ ಸಾಕ್ಷರ ದೇಶಗಳಲ್ಲಿ ಒಂಬತ್ತನೆಯ ಸ್ಥಾನದಲ್ಲಿದೆ. ತನ್ನ ನೆಲದ ಅರ್ಧದಷ್ಟಿದ್ದ ಕಾಡನ್ನು ಟಿಂಬರ್, ಪೀಠೋಪಕರಣ ಇತ್ಯಾದಿಗಳಿಗೆ ಬಳಸಿಕೊಳ್ಳುತ್ತಲೇ 'ಬೆಳೆಸು, ಬಳಸು' ಬಿಗಿ ಕಾನೂನುಗಳ ಮೂಲಕ ಸುಸ್ಥಿರವಾಗಿಟ್ಟಿದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 39ನೇ ಸ್ಥಾನ ಅದರದ್ದು. ಲಾಟ್ವಿಯಾ ಯೂರೋಪಿಯನ್ ಯೂನಿಯನ್, ಯೂರೋಝೋನ್, ವಿಶ್ವಸಂಸ್ಥೆ, ನ್ಯಾಟೊ ಇತ್ಯಾದಿ ಪ್ರಮುಖ ಸಂಸ್ಥೆಗಳ ಸದಸ್ಯತ್ವ ಪಡೆದಿದೆ. ಶಾಂತಿಯುತವಾದ ಹಾಡಿನ ಕ್ರಾಂತಿಯ ಮೂಲಕ ಸ್ವಾತಂತ್ರ್ಯ ಪಡೆದ ದೇಶವಿದು.

1989ರಲ್ಲಿ ಲಕ್ಷಗಟ್ಟಲೆ ಜನರು ಒಬ್ಬರೊಬ್ಬರ ಕೈ ಹಿಡಿದು ಹಾಡುತ್ತ ಸಾಗಿದ್ದರಂತೆ. ಅದರ ಕುರುಹಾಗಿ ಓಲ್ಡ್ ಟೌನ್ ಮಧ್ಯ ಭಾಗದಲ್ಲಿದ್ದ ಎರಡು ಪಾದಗಳ ಗುರುತನ್ನು ಕ್ರಿಸ್ಟಿನಾ ತೋರಿಸಿದಳು. ಸ್ವೀಡಿಷ್, ಜರ್ಮನ್ ಮತ್ತು ರಷ್ಯನ್ ಮಾದರಿಯ ಚರ್ಚ್‌ಗಳು, ಕಟ್ಟಡಗಳು, ದೇಶಕ್ಕಾಗಿ ಹೋರಾಡಿ ಮಡಿದವರ ನೆನಪಿನ ಸ್ಮಾರಕಗಳು, 138 ಅಡಿ ಎತ್ತರದ ಫ್ರೀಡಂ ಮಾನ್ಯುಮೆಂಟ್ ಪರಿಚಯ ಮಾಡಿಸಿದರು.

ಹಿಂದೆ ರಷ್ಯನ್ನರ ಆಳ್ವಿಕೆಯಲ್ಲಿ ಓದುವ ಮಾಧ್ಯಮವೂ ರಷ್ಯನ್, ಪುಸ್ತಕಗಳೂ ರಷ್ಯನ್, ಮಾತೂ ರಷ್ಯನ್ ಆಗಿತ್ತು. ಸ್ಥಳೀಯರು ಮಾತ್ರವಲ್ಲ, ಇಲ್ಲಿ ಬಂದು ನೆಲೆಸಿದ, ರಷ್ಯನ್ ತಾಯಿಭಾಷೆ ಅಲ್ಲದ ಇತರೆ (ಉಕ್ರೇನ್, ಬೆಲಾರಸ್ ಇತ್ಯಾದಿ) ಸೋವಿಯೆತ್ ಜನರು ರಷ್ಯನ್ ಕಲಿಯಲೇಬೇಕಾಯಿತು. ಆ ತಲೆಮಾರಿನಿಂದಾಗಿ ಶೇ.30ರಷ್ಟು ಜನರು ಇಂದಿಗೂ ರಷ್ಯನ್ ಮೂಲದವರೇ ಆಗಿದ್ದಾರೆ. ಇಂದು ಇಲ್ಲಿ ಲಾಟ್ವಿಯನ್ ಭಾಷೆಯೇ ಸಂಪೂರ್ಣ ಸರ್ಕಾರಿ ಭಾಷೆ. ತಮ್ಮ ಭಾಷೆಯ ಬಗ್ಗೆ ಅದೆಷ್ಟು ಅಭಿಮಾನ ಎಂದರೆ ವಿದೇಶಿಯರು ತಮ್ಮೊಡನೆ ರಷ್ಯನ್‌ನಲ್ಲಿ ಮಾತು ಆರಂಭಿಸಿದರೂ ಅವಮಾನವೆಂದು ಭಾವಿಸುತ್ತಾರೆ. ಈಗಿನವರಂತೂ ಅಪ್ಪಿತಪ್ಪಿಯೂ ರಷ್ಯನ್ ಮಾತನಾಡುವುದಿಲ್ಲ. ರಷ್ಯನ್ ಬೋರ್ಡ್‌ಗಳನ್ನೂ ತೆಗೆದುಹಾಕಲಾಗಿದೆ. 1990ರಲ್ಲಿ ಸ್ವಾತಂತ್ರ್ಯ ಸಿಕ್ಕ ಮೇಲೆ ರಷ್ಯನ್ ಬದಲಾಗಿ ಇಂಗ್ಲಿಷ್ ಅನ್ನು ಹೊರಭಾಷೆಯಾಗಿ ಸ್ವೀಕರಿಸಲಾಯಿತು.

ಅಲ್ಲೇ ಅಡ್ಡಾಡುವಾಗ ದೂರದಲ್ಲಿ ವಿಭಿನ್ನ ಆಕಾರದ ಕಟ್ಟಡವೊಂದು ಪದೇ ಪದೇ ಗಮನಸೆಳೆಯುತ್ತಿತ್ತು. ಅದರ ತುದಿ ಅಗಲವಾಗಿದ್ದು, ರಚನೆ ಜಾರುಬಂಡಿಯಂತಿತ್ತು.

ಮಾರನೇದಿನಫಜೀತಿಯೊಂದುಎದುರಾಯಿತು. ಗೂಗಲ್ ನಕ್ಷೆ ಹಿಡಿದೇ ಓಡಾಡುತ್ತಿದ್ದರೂ ಅಂಡರ್‌ಗ್ರೌಂಡ್‌ನ ಅದದೇ ಓಣಿಯೊಳಕ್ಕೆ ನುಗ್ಗಿ ಹೊರಬರತೊಡಗಿದ್ದೆವು. ರಿಗಾದ ಜನನಿಬಿಡ ಪ್ರದೇಶದಲ್ಲಿ ರಸ್ತೆ ದಾಟಲೆಂದು ನಿರ್ಮಿಸಿದ್ದ ಆ ಅಂಡರ್‌ಗ್ರೌಂಡ್‌ನಲ್ಲೋ ಹತ್ತಾರು ಹಾದಿಗಳು. ಅವರಿವರನ್ನು ಕೇಳುವ ಪ್ರಯತ್ನ ಮಾಡಿದೆವು. ಕೆಲವರು ಭಿಕ್ಷೆ ಬೇಡುತ್ತಿದ್ದೇವೆಂದುಕೊಂಡು ಕೆಕ್ಕರಿಸಿ ನೋಡಿದರು. ಅಂತೂ ಸರಿಯಾದ ದಾರಿ ಹಿಡಿದು ಮರಳುವಷ್ಟರಲ್ಲಿ ರಿಗಾ ನಗರದ ಪ್ರಮುಖ ಅಂಗಡಿಗಳ, ಬಿಲ್ ಬೋರ್ಡ್‌ಗಳ ಮತ್ತು ಮಾರ್ಗಗಳ ಹೆಸರುಗಳು ಬಾಯಿಪಾಠವಾಗಿದ್ದವು.



ಪುಸ್ತಕಾಲಯದಲ್ಲಿನ ಗಾಂಧಿ ಪ್ರತಿಮೆ

## ಪೀಪಲ್ಸ್ ಬುಕ್ ಶೆಲ್ಫ್ ವಿನ್ಯಾಸ ವಿಶೇಷ

ಲಾಟ್ವಿಯಾದ ನ್ಯಾಷನಲ್ ಲೈಬ್ರರಿ ಕುರಿತು ಓದಿದ್ದ ನನಗೆ ಅದನ್ನು ನೋಡಲೇಬೇಕೆಂದು ಬಲವಾಗಿ ಅನ್ನಿಸಿತು. ಸರಿ, ಮುಂಜಾನೆ ಬೇಗನೆ ಎದ್ದು ತಯಾರಾಗಿ ಹೊರಟೆವು. ಟ್ರಾಮ್‌ನಲ್ಲಿ ಸ್ವಲ್ಪ ದೂರ ಪಯಣಿಸಿ, ಅಲ್ಲಿಂದ ಮತ್ತೊಂದು ಬಸ್ ಹಿಡಿದು ಮತ್ತೂ ಸ್ವಲ್ಪ ದೂರ ನಡೆಯಬೇಕೆಂದು ಗೂಗಲ್ ಸೂಚಿಸಿತ್ತು. ಏನಾಶ್ಚರ್ಯ! ಎರಡು ದಿನಗಳಿಂದ ನಮ್ಮ ಕಣ್ಣಿಗೆ ರಾಚುತ್ತಿದ್ದ ಇಳಿಜಾರು ಕಟ್ಟಡದ ಎದುರೇ ನಾವು ನಿಂತಿದ್ದೆವು.

ವಿಶಾಲ ಆವರಣದ ವಾಚನಾಲಯ. ಗಾಜಿನೊಳಗೆ ನೇರವಾಗಿರಿಸಿದ ಪುಸ್ತಕಗಳ ಗೋಡೆ ನೆಲದಿಂದ ಐದು ಅಂತಸ್ತಿನವರೆಗೂ ಏರಿತ್ತು. ದಾನಿಗಳಿಂದ ಸಂಗ್ರಹವಾದ ವಿವಿಧ ಲೇಖಕ, ಭಾಷೆ, ದೇಶಗಳ ಸುಮಾರು ಏಳು ಸಾವಿರ ಪುಸ್ತಕಗಳು ಅಲ್ಲಿ ಸುರಕ್ಷಿತವಾಗಿ ಇರಿಸಲ್ಪಟ್ಟಿವೆ. ಬೆಳಕು ಮತ್ತು ಕನ್ನಡಿ ಗಾಜಿನ ತಂತ್ರಗಳ ಮೂಲಕ ವಿವಿಧ ಕೋನಗಳಲ್ಲಿ ವಿವಿಧ ನೋಟಗಳನ್ನು ಹುಟ್ಟಿಸುವ ಅದು 'ಪೀಪಲ್ಸ್ ಬುಕ್ ಶೆಲ್ಫ್'.

13 ಅಂತಸ್ತಿನ ಲೈಬ್ರರಿ ಅದು. ಮೇಲೆ ಹತ್ತಲು ಆವರಣದ ಮಧ್ಯ ಭಾಗದಿಂದ ಲಿಫ್ಟ್, ಎಲಿವೇಟರ್ ಹಾಗೂ ಮೆಟ್ಟಿಲುಗಳಿವೆ. ಲ್ಯಾಟ್ವಿಯನ್ ಮಾತ್ರವಲ್ಲದೆ ಇಂಗ್ಲಿಷ್, ಎಸ್ಟೋನಿಯನ್ ಮುಂತಾದ ಪ್ರಮುಖ ಯೂರೋಪಿಯನ್ ಭಾಷೆಗಳ ಪುಸ್ತಕ ಸಂಗ್ರಹ ಅಲ್ಲಿದೆ. ಹೊರಗಿನಿಂದಲೇ ಇಣುಕುತ್ತ ಸಾಗುತ್ತಿರುವಾಗ ಒಂದು ಕೋಣೆಯಲ್ಲಿ ಮಹಾತ್ಮಾ ಗಾಂಧಿ ಅವರ ಪ್ರತಿಮೆ, ಪುಸ್ತಕಗಳು ಹಾಗೂ ಅಲ್ಲೇ ಒಂದು ಪುಟ್ಟ ಧ್ಯಾನ ಕೇಂದ್ರ ಕಂಡು ಕಣ್ಣು ತುಂಬಿಬಂದವು. 2019ರಲ್ಲಿ ಭಾರತದೊಂದಿಗೆ ಸಾಂಸ್ಕೃತಿಕ ಒಪ್ಪಂದ ನಡೆದಾಗ ಗಾಂಧಿ ಪಿತಾಮಹ ಇಲ್ಲಿ ಪ್ರತಿಷ್ಠಾಪನೆ ಆಗಿದ್ದು.

ಕೊನೆಯ 12 ಮತ್ತು 13ನೇ ಅಂತಸ್ತುಗಳಲ್ಲಿ ಸುತ್ತಲೂ ಗಾಜಿನ ಆವರಣ. ಪೂರ್ತಿ ರಿಗಾ ನಗರ, ಆಚಿನ ಬಾಲ್ಟಿಕ್ ಸಮುದ್ರದ ಪನೋರಮಾ ದೃಶ್ಯ ಅತ್ಯದ್ಭುತವಾಗಿ ಗೋಚರಿಸಿತು. ಈ ದೃಶ್ಯಸೌಂದರ್ಯವನ್ನು ಕಣ್ಣಲ್ಲಿಟ್ಟುಕೊಂಡು ಅಲ್ಲಿಂದ ನಿರ್ಗಮಿಸಿದೆವು.

ಪ್ರತಿಕ್ರಿಯಿಸಿ: feedback@sudha.co.in